ಇಂದಿರಾ ಆವಾಜ್ ಯೋಜನೆ ಅಡಿ ಮನೆಗಳ ಮಂಜೂರು

27 (51) ಶ್ರೀ ಬಸವರಾಜನ್ ಎಸ್.ಕೆ.(ಚಿತ್ರದುರ್ಗ):– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಇಂದಿರಾ ಆವಾಜ್ ಯೋಜನೆಯಡಿ ಹಾಗೂ ಆಶ್ರಯ ಮನೆಗಳ ಯೋಜನೆಯಡಿ ಕಳೆದ 10 ವರ್ಷಗಳಿಂದಲೂ ಮನೆಗಳನ್ನು ಚಿತ್ರದುರ್ಗ ನಗರಕ್ಕೆ ಮಂಜೂರು ಮಾಡದಿರುಲು ಕಾರಣಗಳೇನು;

ಆ) ಹಾಗಿದ್ದಲ್ಲಿ, ಚಿತ್ರದುರ್ಗ ನಗರಕ್ಕೆ ಈ ಯೋಜನೆಗಳಡಿ ಯಾವಾಗ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗುವುದು: ಮಾಹಿತಿ ನೀಡುವುದು;

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):

ಅ) ಇಂದಿರಾ ಆವಾಸ್ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು. ಇದು ಕೇವಲ ಗ್ರಾಮೀಣ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಆದ್ದರಿಂದ ಚಿತ್ರದುರ್ಗ ನಗರಕ್ಕೆ ಇಂದಿರಾ ಆವಾಸ್ ಯೋಜನೆಯಡಿ ಮನೆ ಮಂಜೂರು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ನಗರ ಪ್ರದೇಶದಲ್ಲಿ ವಾಸಿಸುತ್ತಿರುವ ವಸತಿ ರಹಿತರಿಗೆ ರಾಜ್ಯ ಸರ್ಕಾರದ ಯೋಜನೆಯಾದ ನಗರ ಆಶ್ರಯ ಯೋಜನೆ ಜಾರಿಯಲ್ಲಿದ್ದು, ಈ ಯೋಜನೆಯಡಿ ಚಿತ್ರದುರ್ಗ ನಗರಕ್ಕೆ ಕಳೆದ 10 ವರ್ಷಗಳಲ್ಲಿ ಅಂದರೆ 2000–01ನೇ ಸಾಲಿನಿಂದ 2010–11ನೇ ಸಾಲಿನ ವರೆಗೆ ಒಟ್ಟು 2142 ಗುರಿ ನೀಡಿ ಮನೆಗಳನ್ನು ಮಂಜೂರು ಮಾಡಲಾಗಿರುತ್ತದೆ.

ಯೋಜನೆ	ಮಂಜೂರು ಮಾಡಿದ ಗುರಿ
ನಗರ ಆಶ್ರಯ	1842
ವಾಜಪೇಯಿ ನಗರ ವಸತಿ ಯೋಜನೆ	300
ಒಟ್ಟು	**2142**

ಆ) 2000–01ನೇ ಸಾಲಿನಿಂದ 2009–10ನೇ ಸಾಲಿನವರೆಗೆ ನಗರ ಆಶ್ರಯ ಯೋಜನೆಯಡಿ ಚಿತ್ರದುರ್ಗ ನಗರಕ್ಕೆ ಮಂಜೂರಾದ, ಪೂರ್ಣಗೊಂಡ, ಪ್ರಗತಿಯಲ್ಲಿರುವ ಮನೆಗಳ ವಿವರ ಈ ಕೆಳಗಿನಂತಿದೆ.

	ಶ್ರೇಣಿ	ನಿಗದಿ ಪಡಿಸಿದ ಗುರಿ	ಪೂರ್ಣ ಗೊಂಡ ಮನೆಗಳು	ಪ್ರಗತಿಯಲ್ಲಿರುವ ಮನೆಗಳು	ಪ್ರಾರಂಭ ವಾಗದ ಮನೆಗಳು
ನಗರ ಆಶ್ರಯ	2000–2001	308	308	0	0
	2001–2002	268	268	0	0
	2002–2003	364	364	0	0
	2003–2004	322	322	0	0
	2005–2006	580	580	0	0
	2006–2007	ಗುರಿ ನಿಗದಿಪಡಿಸಿರುವುದಿಲ್ಲ			
	2007–2008				
	2008–2009				
	2009–2010				
ಒಟ್ಟು		**1842**	**1842**	**0**	**0**

ಅಲ್ಲದೆ, 2010–11ನೇ ಸಾಲಿನಿಂದ ನಗರ ಆಶ್ರಯ ಯೋಜನೆಯನ್ನು ವಾಜಪೇಯಿ ವಸತಿ ಯೋಜನೆಯೆಂದು ಮರು ನಾಮಕರಣ ಮಾಡಲಾಗಿದ್ದು, ಚಿತ್ರದುರ್ಗ ನಗರಕ್ಕೆ ಒಟ್ಟು 300 ಮನೆಗಳ ಗುರಿಯನ್ನು ಹಂಚಿಕೆ ಮಾಡಿ ಮಂಜೂರು ಮಾಡಲಾಗಿದೆ.

ಹನೂರಿನಲ್ಲಿರುವ ಪ್ರವಾಸಿ ತಾಣಗಳ ಅಭಿವೃದ್ಧಿ

28(50) ಶ್ರೀ ನರೇಂದ್ರ .ಆರ್ (ಹನೂರು) ಮಾನ್ಯ ವಿಧಾನಸಭಾ ಸದಸ್ಯರು:–ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಹನೂರು ಮತಕ್ಷೇತ್ರದಲ್ಲಿರುವ ಪ್ರವಾಸಿ ತಾಣಗಳಾದ ಭರಚುಕ್ಕಿ, ಶಿವನಸಮುದ್ರ ಮತ್ತು ಹೊಗೆನಕಲ್ ಪ್ರದೇಶಗಳು ಪ್ರೇಕ್ಷಣೀಯ ತಾಣಗಳಾಗಿದ್ದು, ಅವುಗಳನ್ನು ಅಭಿವೃದ್ಧಿಪಡಿಸಲು ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಶ್ರೀ ಜಿ. ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನಸೇವೆ ಸಚಿವರು):–